ಕರ್ನಾಟಕ ಸರ್ಕಾರ

ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು

ಸಂಖ್ಯೆ: ಇ-ಆಡಳಿತ ವರ್ಗಾವಣೆ 01/ 2013-14 ದಿನಾಂಕ: 20-06-2014

## ಜ್ಞಾಪನ

ವಿಷಯ: 2013-14 ನೇ ಸಾಲಿಗೆ ಶಿಕ್ಷಕರ ಹಾಗೂ ಗ್ರೂಪ್ ಬಿ ಅಧಿಕಾರಿಗಳ ವರ್ಗಾವಣೆಯನ್ನು ಆನ್ ಲೈನ್ ತಂತ್ರಾಂಶದ ಮೂಲಕ ವರ್ಗಾವಣೆ ಕೌನ್ಸಿಲಿಂಗ್ ನಡೆಸುವ ಬಗ್ಗೆ.

ಉಲ್ಲೇಖ: ಈ ಕಛೇರಿಯ ಸಮ ಸಂಖ್ಯೆ ಸುತ್ತೋಲೆ ದಿನಾಂಕ: 24-05-2014

2013-14 ನೇ ಸಾಲಿಗೆ ಶಿಕ್ಷಕರ ಹಾಗೂ ಗ್ರೂಪ್ ಬಿ ಅಧಿಕಾರಿಗಳ ವರ್ಗಾವಣೆಯನ್ನು ಆನ್ ಲೈನ್ ತಂತ್ರಾಂಶದ ಮೂಲಕ ವರ್ಗಾವಣೆ ಕೌನ್ಸಿಲಿಂಗ್ ನಿರ್ವಹಿಸಲಾಗುವುದು. ಆದ್ದರಿಂದ ಉಲ್ಲೇಖಿತ ಈ ಕಛೇರಿಯ ಅಧಿಕೃತ ಜ್ಞಾಪನದಲ್ಲಿ ಪ್ರಸ್ತಾಪಿಸಿದಂತೆ, ಈ ಕೆಳಗೆ ನಮೂದಿಸಿದ ಅಂಶಗಳ ಬಗ್ಗೆ ತಯಾರಿ ನಡೆಸಿಕೊಂಡು ವರ್ಗಾವಣೆಯ ಪ್ರಕ್ರಿಯೆಯನ್ನು ನಡೆಸಲು ಸಂಪೂರ್ಣವಾಗಿ ಸಿದ್ಧರಿರಲು ಈ ಮೂಲಕ ಸೂಚಿಸಿದೆ.

- ಸದರಿ ವರ್ಗಾವಣೆ ಕೌನ್ಸಿಲಿಂಗ್‌ಗಾಗಿ ಬ್ರಾಡ್ ಬ್ಯಾಂಡ್/ ಡೇಟಾಕಾರ್ಡ ಸೌಲಭ್ಯ ವ್ಯವಸ್ಥೆಗಾಗಿ ಬಿ.ಎಸ್.ಎನ್.ಎಲ್ / ನಿಮ್ಮ ಜಿಲ್ಲೆಯಲ್ಲಿ ಸಮರ್ಪಕವಾಗಿ ಕಾರ್ಯನಿರ್ವಹಿಸುವ ಸಂಸ್ಥೆಯ ವತಿಯಿಂದ **2(mbps)** ವೇಗ ಹೊಂದಿರುವ ಅಂತರಜಾಲ ವ್ಯವಸ್ಥೆಯನ್ನು ಜೂನ್ 2014 ರಿಂದ ವರ್ಗಾವಣೆ ಪ್ರಕ್ರಿಯೆ ಕೊನೆಯವರೆಗಿನ ಅವಧಿಗೆ ಕೂಡಲೇ ಪಡೆಯುವುದು.
- ಸದರಿ ಬ್ರಾಡ್ ಬ್ಯಾಂಡ್ ಸಂಪರ್ಕವನ್ನು ನೀವು ವರ್ಗಾವಣೆ ಪ್ರಕ್ರಿಯೆ ನಡೆಸುವ ಸ್ಥಳದಲ್ಲಿಯೇ ಅಳವಡಿಸಲು ಕ್ರಮಕೈಗೊಂಡು ಸಂಪರ್ಕ ಒದಗಿಸುವ ಸಂಸ್ಥೆಗೆ ಇದರ ವಿವರವನ್ನು ನೀಡುವುದು.
- ವರ್ಗಾವಣೆ ಕೌನ್ಸಿಲಿಂಗ್‌ಗಾಗಿ ಅವಶ್ಯಕವಾಗಿ ಬೇಕಾಗುವ ಸುಸ್ಥಿತಿಯಲ್ಲಿರುವ 05 ಗಣಕಯಂತ್ರಗಳು, 01 ಲೇಸರ್ ಪ್ರಿಂಟರ್ ಹಾಗೂ ತಾತ್ಕಾಲಿಕವಾಗಿ 02 ಕೆ.ವಿ. ಯುಪಿಎಸ್ / ಜೆನರೇಟರ್ ವ್ಯವಸ್ಥೆಯನ್ನು ಕೌನ್ಸಿಲಿಂಗ್ ನಡೆಸಲು ಉದ್ದೇಶಿಸಿರುವ ಸ್ಥಳದಲ್ಲಿ ಮಾಡತಕ್ಕದ್ದು.
- ಸದರಿ ವರ್ಗಾವಣೆ ಕೌನ್ಸಿಲಿಂಗ್ ಪ್ರಕ್ರಿಯೆಯನ್ನು ವೀಕ್ಷಿಸಲು ಅನುವಾಗುವಾಗುವಂತೆ, ವೀಕ್ಷಣೆಗಾಗಿ **LCD Projector** ವ್ಯವಸ್ಥೆ ಮಾಡಿ ಕೌನ್ಸಿಲಿಂಗ್ ಕೊಠಡಿಯ ಒಳಗೆ ಹಾಗೂ ಹೊರಗೆ ಕಾಣುವಂತೆ ಪರದೆಯ ವ್ಯವಸ್ಥೆಯನ್ನು ಮಾಡುವುದು.
- ವರ್ಗಾವಣೆ ಕೌನ್ಸಿಲಿಂಗ್ ಸ್ಥಳ ನಿಗದಿಪಡಿಸಿ, ವರ್ಗಾವಣೆ ಬಯಸಿದವರಿಗೆ ಅನುವಾಗುವಂತೆ ಪ್ರಕಟಣೆ ನೀಡುವುದು ಹಾಗೂ ವರ್ಗಾವಣೆ ಕೌನ್ಸಿಲಿಂಗ್ ಸ್ಥಳದಲ್ಲಿ ಶೌಚಾಲಯ ಮತ್ತು ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡತಕ್ಕದ್ದು.

2014-15 ನೇ ಸಾಲಿಗೆ ಶಿಕ್ಷಕರ ಹಾಗೂ ಗ್ರೂಪ್ ಬಿ ಅಧಿಕಾರಿಗಳ ವರ್ಗಾವಣೆಯನ್ನು ಆನ್ ಲೈನ್ ತಂತ್ರಾಂಶದ ಮೂಲಕ ವರ್ಗಾವಣೆ ಕೌನ್ಸಿಲಿಂಗ್ ನಡೆಸಲು ಈ ಮೇಲೆ ಪ್ರಸ್ತಾಪಿಸಿದ ವ್ಯವಸ್ಥೆಗಳನ್ನು ಮಾಡಲು ತಗಲುವ ಖರ್ಚುವೆಚ್ಚವನ್ನು ನಿಮ್ಮ ಕಛೇರಿಯ ಸಾದಿಲ್ವಾರು ವೆಚ್ಚದಲ್ಲಿ ಅಥವಾ ಸರ್ವ ಶಿಕ್ಷಣ ಅಭಿಯಾನದ ಆಡಳಿತಾತ್ಮಕ ಅನುದಾನದಲ್ಲಿ ನಿಯಮಾನುಸಾರ ಭರಿಸಬಹುದಾಗಿದೆ.

ಅಪರ ಆಯುಕ್ತರು (ಆಡಳಿತ) ಹಾಗೂ
ಇ-ಆಡಳಿತ ನೋಡಲ್ ಅಧಿಕಾರಿಗಳು

**ಇವರಿಗೆ**

1. ರಾಜ್ಯದ ಎಲ್ಲಾ ಉಪನಿರ್ದೇಶಕರು(ಆಡಳಿತ) ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತಕ್ರಮಕ್ಕಾಗಿ
2. ನಿರ್ದೇಶಕರು(ಪ್ರಾಥಮಿಕ) (ಪ್ರೌಢ ಶಿಕ್ಷಣ) ಆಯುಕ್ತರ ಕಛೇರಿ ಇವರಿಗೆ ಮಾಹಿತಿಗಾಗಿ
3. ಸಹ ನಿರ್ದೇಶಕರು-I ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತಕ್ರಮಕ್ಕಾಗಿ
4. ಸಹ ನಿರ್ದೇಶಕರು ಸಾರ್ವಜನಿಕ ಶಿಕ್ಷಣ ಇಲಾಖೆ, ಮೈಸೂರು ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತಕ್ರಮಕ್ಕಾಗಿ

ಪ್ರತಿಯನ್ನು,

1. ಮಾನ್ಯ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರಿಗೆ ಗೌರವಪೂರ್ವಕವಾಗಿ ಮಾಹಿತಿಗಾಗಿ
2. ಮಾನ್ಯ ರಾಜ್ಯ ಯೋಜನಾ ನಿರ್ದೇಶಕರು, ಸರ್ವಶಿಕ್ಷಣ ಇಲಾಖೆ, ಬೆಂಗಳೂರು ಇವರಿಗೆ ಮಾಹಿತಿಗಾಗಿ
3. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಗುಲ್ಬರ್ಗಾ ಹಾಗೂ ಧಾರವಾಡ ಇವರಿಗೆ ಮಾಹಿತಿಗಾಗಿ